(ಇಂದು ದಿನಾಂಕಃ 18–03–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ಆರ್ ಎಂ ಆರ್ ವಕೀಲರಿಂದ ಃ-

1) ನಾನು ಕಳೆದ 25 ವರ್ಷಗಳಿಂದ ಕಟ್ಟಡ ನಿರ್ಮಾಣ ಕೆಲಸ ಮಾಡುತ್ತಾ ಬಂದಿರುತ್ತೇನೆ. ನನ್ನ ಸ್ವಂತ ಊರು ಶಿಶುವಿನಹಳ್ಳಿ ಇರುತ್ತದೆ. ನಾನು ವಿವಾಹಿತ ಇದ್ದು ನನಗೆ ಒಬ್ಬನೇ ಮಗನಿರುತ್ತಾನೆ. ನಾನು ನನ್ನ ಕುಟುಂಬವು ಶಿಶುವಿನಹಳ್ಳಿ ಗ್ರಾಮದ 556 ರಲ್ಲಿ ವಾಸವಿರುತ್ತೇವೆ. ವಿಪಿಸಿ ಸಂಖ್ಯೆ 267/ಅ ಮತ್ತು ಬ ಹಾಗೂ ವಿಪಿಸಿ ಸಂಖ್ಯೆ 556 ರ ನಡುವೆ ಸುಮಾರು ಅರ್ಧ ಕೀಲೋಮೀಟರ ಅಂತರದಲ್ಲಿರುತ್ತದೆ. ಸಾಕ್ಷಿಯು ಮುಂದುವರೆದು 267 ಬೇರೆ ಓಣಿಯಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಎರಡೂ ಆಸ್ತಿಗಳ ನಡುವೆ ಬಹಳಷ್ಟು ಮನೆಗಳು ಇವೆ ಎಂದರೆ ಸರಿ.

2) ವಿಪಿಸಿ ಸಂಖ್ಯೆ 267/ಅ ರ ಪೂರ್ವ ಪಶ್ಚಿಮ 24 ಅಡಿ, ಉತ್ತರ ದಕ್ಷಿಣ 56 ಅಡಿ ಇರುತ್ತದೆ. ವಿಪಿಸಿ ಸಂಖ್ಯೆ 267/ಬ ರ ಪೂರ್ವ ಪಶ್ಚಿಮ 24 ಅಡಿ, ಉತ್ತರ ದಕ್ಷಿಣ 51 ಅಡಿ ಇರುತ್ತದೆ. ವಿಪಿಸಿ ಸಂಖ್ಯೆ 267/ಬ ರಲ್ಲಿ ಮನೆ ಇರುತ್ತದೆ. ವಿಪಿಸಿ ಸಂಖ್ಯೆ 267/ಅ ರಲ್ಲಿ ಕಟ್ಟಡ ನಿರ್ಮಾಣ ಚಾಲ್ತಿಯಲ್ಲಿರುತ್ತದೆ. ಸದರಿ ಕಟ್ಟಡ ನಿರ್ಮಾಣವು 2011 ರಿಂದ ಪ್ರಾರಂಭವಾಗಿರುತ್ತದೆ. ಅದು ಅರ್ಧದಲ್ಲಿ ನಿಂತಿರುತ್ತದೆ.

3) ಸಾಮಾನ್ಯವಾಗಿ ಕಟ್ಟಡ ನಿರ್ಮಾಣ ಮಾಡುವ ಪೂರ್ವದಲ್ಲಿ ಅಧಿಕಾರಿಯಿಂದ ಪರವಾನಿಗೆ ಪಡೆದುಕೊಳ್ಳುತ್ತೇವೆ. ಪರವಾನಿಗೆಯಲ್ಲಿ ಷರತ್ತುಗಳು ಅಳವಡಿಸಲಾಗಿರುತ್ತದೆ ಎಂದರೆ ಸರಿ. 2011 ರಲ್ಲಿ ನಾನು ಕಟ್ಟಡ ಪರವಾನಿಗೆ ನೋಡಿರುತ್ತೇನೆ. ಷರತ್ತುಗಳಲ್ಲಿ ಕಾಲಬದ್ಧ ನಿರ್ಮಾಣ ಷರತ್ತು ಇರುತ್ತದೆ ಎಂದರೆ ಸರಿ. 2011 ರಲ್ಲಿ ನೀಡಿದ ಪರವಾನಿಗೆಯಲ್ಲಿ ಕಟ್ಟಡ ನಿರ್ಮಾಣ ಕಾಲಮಿತಿ ಎಷ್ಟು ಇತ್ತು ಎಂದು ನೋಡಿಲ್ಲ. ವಿಪಿಸಿ ಸಂಖ್ಯೆ 267 ರ ಚಕಬಂದಿ ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿಯು ಇಂದು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನನಗೆ ದಾವೆಯ ಬಗ್ಗೆ ಹಾಗೂ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ಪ್ರತಿವಾದಿಗೆ ಸಹಾಯ ಮಾಡಲು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**